# ಹೈಕುಗಳು

ಚೆನ್ನಾಗಿದ್ದರೂ
ಬೀದಿಯಲ್ಲಿ ಬಿದ್ದ ಹೂ
ಬೇಡ ಯಾರಿಗೂ

★

ನೋಡುತ್ತಾ ಇರಿ
ಬರುತ್ತಿದೆ ಕವಿತೆ
ಸಾಲು ಇರುವೆ

★

ಕಡಲ ತೀರ
ಮರಳ ಹಾಳೆಯಲ್ಲಿ
ಕಾಲ ಬರಹ

★

ಮಲಗಿದರೆ
ದುರ್ಘಟನೆ ನಡೆಯು
ವುದೆ ಇಲ್ಲವೆ

★

ಲೆಕ್ಕ ಹಾಕುತ್ತ
ಮುತ್ತನ್ನೂ ಹೈಕು ಕವಿ
ಹದಿನೇಳಕ್ಕೆ

★

ಹೈಕುಗಳಿಗೆ
ಅರ್ಥಬೇಕಿಲ್ಲ ಅದು
ಬಾಂಕ್ ಖಾತೆಯೆ?

★

ಬಿಳಿ ಮಗಿಲು
ಸಂಜೆ ರವಿಯ ಹೆಣ
ಹೊತ್ತ ಹೆಗಲು

★

ಮತ್ತೊಮ್ಮೆ ಹುಟ್ಟಿ
ಬಾ ಅನ್ನದೆ ಇದ್ದರೂ
ಬರುವ ರವಿ

★

ಮಕರಂದವ
ಹೀರಿ ಹೋದ ಅದಕ್ಕೇ
ಹಾರಿ ಬಂದವ

★

ವ್ಯರ್ಥವಾಗಿಲ್ಲ
ನುಸಿ ಓಡಿಸುತ್ತಿದೆ
ಗೋವಿನ ಬಾಲ

★

ಅವಳ ನಗೆ
ಇವಳ ಕಣ್ಣೊಳಗೆ
ಕಂಡದ್ದು ಹೇಗೆ?

★

ರಪ್ಪೆಂದು ಕವಿ
ಮುಟ್ಟಿದೊಡನೆ ಡೈರಿ
ಹೈಕು ಅಪ್ಪಚ್ಚಿ

★



ಬರೆಯುವುದು
ಸುಲಭ ಕಷ್ಟ ನಿನ್ನ
ತೊರೆಯುವುದು

★

ಸ್ನಾನದ ಕೋಣೆ
ಜಾರಿತು ಪುಳಕ್ಕನೆ
ಸೋಪು ಕವಿತೆ

★

ಕೊಳೆತ ಹೂವು
ಗಳ ತುಳಿದವರ
ಕಾಲು ಜಾರಿತು

★

ಚೆಲುವೆ ನಿಜ
ಆದರೆ ಎಲ್ಲಾ ಬಣ್ಣ
ಮಾಸ್ಕ್ ನುಂಗಿತು

● **ಎಚ್. ಡುಂಡಿರಾಜ್**

ಕಲೆ: ವಾಗೀಶ ಹೆಗಡೆ



